ಎಫ್ ಡಿ ಪಿ ನಂ. 7/2019

ಪಿ ಡಬ್ಲ್ಯು 4

ದಿನಾಂಕ 13-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀಮತಿ ಬಿ ಆರ್ ಆರ್ ವಕೀಲರಿಂದಃ

ನಿಪಿ-1 ರ ವಿಲ್ ನಾಮೆಯನ್ನು ಬರೆದಿರುವ ಪತ್ರಬರಹ ಮಾಡಿದ ಬಾಲಾಜಿ ನಾಯ್ಕ ವಕೀಲರು ನನಗೆ ಏನಾಗಬೇಕು ಎಂದರೆ ಸಾಕ್ಷಿ ಸಹೋದರ ಎಂದು ನುಡಿಯುತ್ತಾರೆ. ನಾನು ಸುಮಾರು 15 ವರ್ಷಗಳಿಂದ ಕಂಟ್ರಾಕ್ಟ ಕೆಲಸ ಮಾಡುತ್ತಿದ್ದೇನೆ. ಸುಮಾರು 10-15 ವರ್ಷಗಳಿಂದ ನನಗೆ 4 ನೇ ಎದುರುದಾರರಾದ ಶ್ರೀನಿವಾಸ್ ರವರ ಪರಿಚಯ ಇದೆ. ನನಗೆ ಅಂಜನಪ್ಪರವರ ಪರಿಚಯ ಇರಲಿಲ್ಲ ಎಂದರೆ ಸಾಕ್ಷಿ ನನ್ನ ಬಳಿ ಟ್ರಾಕ್ಟರ್ ಇದ್ದು ಬೇಸಾಯ ಮಾಡಲು ನಾನು ಅಂಜನಪ್ಪರವರ ಜಮೀನಿಗೆ ಸುಮಾರು 10 ವರ್ಷಗಳಿಂದ ಕಳುಹಿಸುತ್ತಿದ್ದು ಆಗಾಗಿ ಅಂಜನಪ್ಪರವರ ಪರಿಚಯ ನನಗೆ ಇದೆ ಎಂದು ನುಡಿಯುತ್ತಾರೆ. ಅಂಜನಪ್ಪರವರು ವಿಲ್ ಬರೆಯುತ್ತಿದ್ದಾರೆಂದು ನನಗೆ ಯಾರು ಕರೆಸಿರುತ್ತಾರೆ ಎಂದರೆ ಸಾಕ್ಷಿ ಅಂಜನಪ್ಪರವರೇ ಕರೆಸಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಯಾವ ದಿನಾಂಕದಂದು ಕರೆಸಿರುತ್ತಾರೆ ಎಂದರೆ ಸಾಕ್ಷಿ ದಿನಾಂಕ 15/06/2020 ರಂದು ಎಂದು ನುಡಿಯುತ್ತಾರೆ. ಎಲ್ಲಿಗೆ ಎಂದರೆ ಸಾಕ್ಷಿ ಉಪನೊಂದಣಾಧಿಕಾರಿಗಳ ಕಚೇರಿಗೆ ಎಂದು ನುಡಿಯುತ್ತಾರೆ. ಆ

ದಿನ  ನಾನು ಉಪನೋಂದಣಾಧಿಕಾರಿಗಳ ಕಚೇರಿಗೆ ಹೋದಾಗ ಅಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಬಸವರಾಜು, ಶ್ರೀನಿವಾಸ, ವಕೀಲರಾದ ಬಾಲಾಜಿ ನಾಯ್ಕ ಮತ್ತು ನಾನು ಇದ್ದೇವು. ಆ ಸಮಯದಲ್ಲಿ ಅಂಜನಪ್ಪರವರಿಗೆ ಓಡಾಡಲು ಆಗದೆ ಅವರು ಮನೆಯಲ್ಲೇ ಇದ್ದರು, ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಪತ್ರಗಳನ್ನು ತಯಾರಿಸಿಕೊಂಡು ಅಂಜನಪ್ಪರವರ ಮನೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಪತ್ರ ಬರೆಯುವ ಸಮಯದಲ್ಲಿ ಅಂಜನಪ್ಪರವರು ಇರಲಿಲ್ಲ ಎಂದರೆ ಸರಿ. ಪತ್ರವನ್ನು ಇದೇರೀತಿ ಬರೆಯಬೇಕು ಎಂದು ಮಾಹಿತಿ ನೀಡಿದವರು ಶ್ರೀನಿವಾಸ್ ಎಂದರೆ ಸಾಕ್ಷಿ ಇಲ್ಲ ಅಂಜನಪ್ಪರವರು ಎಂದು ನುಡಿಯುತ್ತಾರೆ. ಅಂಜನಪ್ಪರವರು ಯಾವ ಯಾವ ಆಸ್ತಿಗಳ ಬಗ್ಗೆ ವಿಲ್ ಬರೆಯಬೇಕು ಎಂದು ಹೇಳಿದ್ದರು ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ವಕೀಲರಾದ ಬಾಲಾಜಿನಾಯ್ಕರವರಿಗೆ ಗೊತ್ತಿದೆ ಎಂದು ನುಡಿಯುತ್ತಾರೆ. ಎಷ್ಟು ಆಸ್ತಿಗಳಿಗೆ ಸಂಬಂದಪಟ್ಟಂತೆ ವಿಲ್ ಬರೆಯಬೇಕು ಎಂದು ತಿಳಿಸಿದ್ದರೂ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಆಸ್ತಿಗಳು ಯಾರ ಖಾತೆಯಲ್ಲಿದೆ ಎಂದು ತಿಳಿಸಿದ್ದರಾ ಎಂದರೆ ಸಾಕ್ಷಿ ಅಂಜನಪ್ಪರವರ ಖಾತೆಯಲ್ಲಿದ್ದವು ಎಂದು ನುಡಿಯುತ್ತಾರೆ. ಖಾತೆ ಅಂಜನಪ್ಪರವರ ಹೆಸರಿನಲ್ಲಿರುವ ಬಗ್ಗೆ ಪಹಣಿ ಮತ್ತು ಎಂ ಆರ್ ಆದೇಶವನ್ನು ನನ್ನ ಸಮಕ್ಷಮದಲ್ಲಿ ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನನ್ನ

ಸಮಕ್ಷಮದಲ್ಲಿ ಯಾವ ದಾಖಲೆಗಳನ್ನು ಅಂಜನಪ್ಪರವರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ದಾಖಲೆಗಳನ್ನು ನಾನು ನೋಡಿರುವುದಿಲ್ಲ, ಆದರೆ ಸಾಕ್ಷಿಯಾಗಿ ಸಹಿ ಮಾಡಬೇಕೆಂದು ಅಂಜನಪ್ಪರವರು ನನಗೆ ಹೇಳಿದ್ದರೂ ಆಗಾಗಿ ನಾನು ಹೋಗಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆಗಾಗಿ ವಿಲ್ ನಾಮೆ ಮಾಡುವ ಸಮಯದಲ್ಲಿ ಯಾವ ಮಾಹಿತಿ ಮತ್ತು ದಾಖಲೆ ನೀಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ಬಸವರಾಜುರವರು ಯಾರಿಗೆ ಪರಿಚಯಸ್ಥರು ಎಂದರೆ ಸಾಕ್ಷಿ ನನಗೂ ಮತ್ತು ಅಂಜನಪ್ಪ ಇಬ್ಬರಿಗೂ ಪರಿಚಯ ಎಂದು ನುಡಿಯುತ್ತಾರೆ. ನಾನು ಮತ್ತು ಬಸವರಾಜುರವರು ಒಟ್ಟಿಗೆ ಉಪನೊಂದಣಾಧಿಕಾರಿಗಳ ಕಚೇರಿಗೆ ಬಂದಿದ್ದ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದು ಯಾವತ್ತು ಎಂದರೆ ಸಾಕ್ಷಿ ದಿನಾಂಕ 15/06/2020 ರಂದು ಎಂದು ನುಡಿಯುತ್ತಾರೆ. ದಿನಾಂಕ 15/06/2020 ಕ್ಕೂ ಪೂರ್ವದಲ್ಲಿ ನಾನು ಅಂಜನಪ್ಪರವರನ್ನಾಗಲಿ ಉಪನೊಂದಣಾಧಿಕಾರಿಗಳನ್ನಾಗಲಿ ಬೇಟಿಯಾಗಿಲ್ಲ ಎಂದರೆ ಸಾಕ್ಷಿ ಅಂಜನಪ್ಪರವರನ್ನು ಬೇಟಿ ಮಾಡಿದ್ದೆ ಎಂದು ನುಡಿಯುತ್ತಾರೆ. ದಿನಾಂಕ 15/06/2020 ರಂದು ನಾನು ಒಟ್ಟು ಎಷ್ಟು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ 2-3 ಸಹಿ ಮಾಡಿರಬಹುದು ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ 2-3 ಸಹಿಗಳನ್ನು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನಾನು ಮಾಡಿರುತ್ತೇನೆ

ಎಂದರೆ ಸರಿ. ದಿನಾಂಕ 08/06/2020 ರಂದು ನಾನು ಯಾವುದೇ ಪತ್ರಕ್ಕೆ ಸಹಿ ಹಾಕಿರುವುದಿಲ್ಲ ಎಂದರೆ ಸರಿ. ಅದೇರೀತಿ ದಿನಾಂಕ 10/06/2020 ರಂದು ಸಹ ನಾನು ಯಾವುದೇ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸಾಕ್ಷಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 10/06/2020 ರಂದು ನಾನು ಎಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಎಂದು ನುಡಿಯುತ್ತಾರೆ. ದಿನಾಂಕ 10/06/2020 ಕ್ಕೆ ನಾನು ಯಾವ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ವಿಲ್ ನಾಮೆಗೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 10/06/2020 ಕ್ಕೆ ಸಹಿ ಮಾಡಿರುವುದು ಸರಿಯಾ ಅಥವಾ 15/06/2020 ಕ್ಕೆ ಸಹಿ ಮಾಡಿರುವುದು ಸರಿಯಾ ಎಂದರೆ ಸಾಕ್ಷಿ 15/06/2020 ಕ್ಕೆ ಎಂದು ನುಡಿಯುತ್ತಾರೆ. ವಿಲ್ ನಾಮೆಗೆ ಬಸವರಾಜುರವರು ಯಾವ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 15/06/2020 ರಂದು ವಿಲ್ ನಾಮೆಯನ್ನು ನೊಂದಣಿಗೆ ಒಳಪಡಿಸಲು ಉಪನೊಂದಣಾಧಿಕಾರಿಗಳ ಕಚೇರಿಗೆ ಯಾರು ಹಾಜರುಪಡಿಸಿರುತ್ತಾರೆ ಎಂದರೆ ಸಾಕ್ಷಿ ವಕೀಲರಾದ ಬಾಲಾಜಿ ನಾಯ್ಕರವರು ಎಂದು ನುಡಿಯುತ್ತಾರೆ. ಅಂಜನಪ್ಪರವರು ನನ್ನ ಸಮಕ್ಷಮದಲ್ಲಿ ವಿಲ್ ನಾಮೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸರಿ. ಸಾಕ್ಷಿ ಮುಂದುವರೆದು ನಾನು ಉಪನೊಂದಣಾಧಿಕಾರಿಗಳ

ಕಚೇರಿಯಲ್ಲಿ ಸಹಿ ಮಾಡಿದ್ದು, ಅಂಜನಪ್ಪರವರ ಮನೆಗೆ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ವಿಲ್ ನಾಮೆಯ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲದೆ ಇದ್ದರೂ ಸಹ 4 ನೇ ಎದುರುದಾರರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಅಂಜನಪ್ಪರವರೇ ವಿಲ್ ನಾಮೆ ಮಾಡುತ್ತಿರುವುದಾಗಿ ಹೇಳಿ ನನ್ನನ್ನು ಉಪನೊಂದಣಾಧಿಕಾರಿಗಳ ಕಚೇರಿಗೆ ಬರುವಂತೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 15/06/2020 ರಂದು ನಾನು ಉಪನೊಂದಣಾಧಿಕಾರಿಗಳ ಕಚೇರಿಗೆ ಹೋದ ಸಮಯದಲ್ಲಿ ಅಲ್ಲಿ ಅಂಜನಪ್ಪರವರು ಇರಲಿಲ್ಲ ಎಂದರೆ ಸರಿ. ದಿನಾಂಕ 15/06/2020 ರಂದು ಯಾವುದೇ ವಿಲ್ ನಾಮೆ ನೊಂದಣಿಯಾಗಿಲ್ಲ ಮತ್ತು ಅಂಜನಪ್ಪರವರು ಯಾವುದೇ ವಿಲ್ ನಾಮೆ ಮಾಡದೆ ಇದ್ದರೂ ಸಹ ನಾನು ಶ್ರೀನಿವಾಸ್ ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.